ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.02 | Issue. 215 | Pages. 2 | Date: 05-08-2026, WEDNESDAY RNI NO: KARKAN/2024/89601 Kannada Daily
ಸಂಪುಟ : 02 - ಸಂಚಿಕೆ : 215 - ಪುಟಗಳು : 2 05-08-2026 ಬುಧವಾರ Ph: 8762954248 ದರ : ₹1

# ಜಿಲ್ಲೆ ಬರಪೀಡಿತ ಎಂದು ಘೋಷಿಸಿ: ರೇವಣ್ಣ

## ನಮ್ಮ ಕೈನಲ್ಲಿ ಆಗಲಿಲ್ಲ ಅವರು ಅಭಿವೃದ್ಧಿ ಮಾಡಲಿ: ಸಚಿವ ಕೆಎಂಶಿಗೆ ಟಾಂಗ್!

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಜಿಲ್ಲೆಯಲ್ಲಿ ಮಳೆ ಕೊರತೆ ಹಾಗೂ ಬೆಳೆ ರೋಗದ ಪರಿಣಾಮ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರ ಕೂಡಲೇ ಹಾಸನ ಜಿಲ್ಲೆಯನ್ನು ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಬೇಕು ಎಂದು ಮಾಜಿ ಸಚಿವ ಹಾಗೂ ಹೊಳೆನರಸೀಪುರ ಶಾಸಕ ಎಚ್.ಡಿ. ರೇವಣ್ಣ ಆಗ್ರಹಿಸಿದರು.

ಹೊಳೆನರಸೀಪುರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಿಂದೆ ಹಾಸನ ಜಿಲ್ಲೆಯಲ್ಲಿ ಕೇವಲ ಮೂರು-ನಾಲ್ಕು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯಲಾಗುತ್ತಿತ್ತು. ಆದರೆ ಈಗ ಅದರ ವ್ಯಾಪ್ತಿ ಸುಮಾರು ಮೂರು ಸಾವಿರ ಎಕರೆಗೆ ಹೆಚ್ಚಾಗಿದ್ದರೂ, ರೋಗಬಾಧೆಯಿಂದ ಈ ವರ್ಷದ ಆಲೂಗಡ್ಡೆ ಬೆಳೆ ಸಂಪೂರ್ಣ ಹಾನಿಯಾಗಿದೆ ಎಂದು ಹೇಳಿದರು.

ಈ ಬಾರಿ ಜಿಲ್ಲೆಯಲ್ಲಿ ಸುಮಾರು 80 ಸಾವಿರ ಹೆಕ್ಟೇರ್ ಪ್ರದೇಶದ ಮೆಕ್ಕೆಜೋಳ ಬೆಳೆ ನಾಶವಾಗಿದೆ ಎಂದು ಹೇಳಿದ ರೇವಣ್ಣ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಕ್ಷಣ ಕ್ಷೇತ್ರಕ್ಕೆ ಭೇಟಿ ನೀಡಿ ಬೆಳೆ ಹಾನಿಯ ಸಮಗ್ರ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವಾಸ್ತವ ವರದಿ ಸಲ್ಲಿಸಬೇಕು ಎಂದು ಒತ್ತಾಯಿಸಿದರು.



ರೈತರು ತೀವ್ರ ಸಂಕಷ್ಟದಲ್ಲಿದ್ದು, ಸರ್ಕಾರ ತಕ್ಷಣ ರೈತರ ಸಾಲಮನ್ನಾ ಮಾಡಬೇಕು. ಕಳೆದ ವರ್ಷದ ಬೆಳೆ ವಿಮೆ ಹಣಮೂ ಇನ್ನೂ ರೈತರಿಗೆ ತಲುಪಿಲ್ಲ ಎಂದು ಆರೋಪಿಸಿದ ಅವರು, ಈ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಈಗಾಗಲೇ ಮನವಿ ಮಾಡಿರುವುದಾಗಿ ತಿಳಿಸಿದರು.

ರೈತರ ಬೆಳೆಗಳನ್ನು ಮಧ್ಯವರ್ತಿಗಳ ಮೂಲಕ ಖರೀದಿಸುವ ಬದಲು ಸರ್ಕಾರವೇ ನೇರವಾಗಿ ರೈತರಿಂದ ಖರೀದಿ ಮಾಡಬೇಕು ಎಂದು ರೇವಣ್ಣ ಆಗ್ರಹಿಸಿದರು. ಜೊತೆಗೆ ಮಹಾರಾಜರ ಕಾಲದ ಕಾಲುವೆಗಳಿಗೆ ನೀರು ಹರಿಸಿ, ರೈತರಿಗೆ ಯಾವ ಬೆಳೆ ಬೆಳೆಯಬೇಕು ಎಂಬುದರ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬೇಕು.

ಅದು ಸಾಧ್ಯವಾಗದಿದ್ದರೆ ಬೆಳೆ ನಷ್ಟಕ್ಕೆ ಸಮರ್ಪಕ ಪರಿಹಾರ ನೀಡಬೇಕು ಎಂದು ಹೇಳಿದರು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವ ಉದ್ದೇಶವಿದ್ದರೆ, ಮೊದಲು ಕರ್ನಾಟಕದ ರೈತರಿಗೆ ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆ.ಎಂ. ಶಿವಲಿಂಗೇಗೌಡ ನೇಮಕಗೊಂಡಿರುವ ಬಗ್ಗೆ ಪ್ರತಿಕ್ರಿಯಿಸಿದ ರೇವಣ್ಣ, "ನಮ್ಮ ಕೈಯಲ್ಲಿ ಆ ಕೆಲಸ ಆಗಲಿಲ್ಲ. ಅವರು ಉತ್ತಮ ಕೆಲಸ ಮಾಡಿ ಜಿಲ್ಲೆಯ ಜನರ ವಿಶ್ವಾಸ ಗಳಿಸಲಿ. ಅವರ ವಿರುದ್ಧ ನಮಗೆ ಯಾವುದೇ ದ್ವೇಷ ಇಲ್ಲ" ಎಂದರು.

ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರ ರಾಜೀನಾಮೆ ಕುರಿತು ಪ್ರತಿಕ್ರಿಯಿಸಿದ ಅವರು, "ಅದು ಅವರ ಪಕ್ಷದ ಆಂತರಿಕ ವಿಚಾರ. ಮುಖ್ಯಮಂತ್ರಿ ಅವರಿಗೆ ಇನ್ನೂ ಎರಡು ವರ್ಷ ಅಧಿಕಾರವಿದೆ. ದೇವರು ನೀಡಿರುವ ಅವಕಾಶವನ್ನು ರಾಜ್ಯದ ಅಭಿವೃದ್ಧಿಗೆ ಬಳಸಿಕೊಳ್ಳಲಿ. ನಾವು ಮಾಡುವ ಉತ್ತಮ ಕೆಲಸಗಳನ್ನು ಅವರೂ ಮಾಡಿದರೆ ಇನ್ನೂ ಸಂತೋಷ" ಎಂದು ಹೇಳಿದರು.

## 'ಮೊಂಡತನ ಬಿಟ್ಟು ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡಿ: ಎ.ಮಂಜು

ಅರಸೀಕೆರೆ : ಶಾಸಕ ಕೆ.ಎಂ. ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಜವಾಬ್ದಾರಿ ನೀಡಿರುವ ಹಿನ್ನೆಲೆಯಲ್ಲಿ ಮಾಜಿ ಸಚಿವ ಎ.ಮಂಜು ಪ್ರತಿಕ್ರಿಯೆ ನೀಡಿ, ವೈಯಕ್ತಿಕ ಟೀಕೆಗಳನ್ನು ಬದಿಗೊತ್ತಿ ಜಿಲ್ಲೆಯ ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸ್ಥಾನ ದೊರೆತಿರುವುದು ಉತ್ತಮ ಬೆಳವಣಿಗೆ. ಈಗ ಜನರ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡಿ ಉತ್ತಮ ಹೆಸರು ಗಳಿಸಬೇಕು ಎಂದು ಹೇಳಿದರು.

ಅವರು, "ಮಂತ್ರಿ ಆದ ಮೇಲೆ ಕೇವಲ ಅರಸೀಕೆರೆ ಕ್ಷೇತ್ರವನ್ನಷ್ಟೇ ನೋಡದೆ, ಇಡೀ ಹಾಸನ ಜಿಲ್ಲೆಯ ಅಭಿವೃದ್ಧಿಯತ್ತ ಗಮನ ಹರಿಸಬೇಕು. ಮೊಂಡತನದಲ್ಲಿ ಮಾತನಾಡುವುದನ್ನು ಬಿಟ್ಟು ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ನೀಡಬೇಕು," ಎಂದು ಸಲಹೆ ನೀಡಿದರು.

ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಎದುರಾಗಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. ಸರ್ಕಾರ ರೈತರ ಪರವಾಗಿದ್ದರೆ ತಕ್ಷಣ ನೆರವಿಗೆ ಬರಬೇಕು. ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಅಥವಾ ಸಾಲಮನ್ನಾ ಘೋಷಿಸಬೇಕು ಎಂದು ಎ. ಮಂಜು ಒತ್ತಾಯಿಸಿದರು.



"ಕಳೆದ ಬಾರಿ ಬೆಳೆ ವಿಮೆ ಹಣವನ್ನೇ ನೀಡಿಲ್ಲ. ಈ ಬಾರಿ ರೈತರಿಗೆ ಹೇಗೆ ನೆರವು ನೀಡುತ್ತಾರೆ? ಸರ್ಕಾರದಲ್ಲಿ ಹಣ ಇಲ್ಲದಿದ್ದರೂ ರೈತರಿಗಾಗಿ ಸಾಲ ಮಾಡಿ ಆದರೂ ಪರಿಹಾರ ನೀಡಬೇಕು," ಎಂದು ಹೇಳಿದರು.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಅಸಮಾಧಾನ ಮತ್ತು ಬಂಡಾಯದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, "ಆಡಳಿತದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದನ್ನು ಕಾದು ನೋಡಬೇಕು. ವಿಧಾನಸಭೆ ಅಧಿವೇಶನ ಮುಗಿಯಲಿ, ಮುಂದೆ ಏನಾಗುತ್ತದೆ ಎಂಬುದು ಗೊತ್ತಾಗುತ್ತದೆ. ಅವರ ಶಾಸಕರು ರಾಜೀನಾಮೆ ಕೊಟ್ಟರೆ ನಮಗೇನು?" ಎಂದು ಪ್ರತಿಕ್ರಿಯಿಸಿದರು.

ಕೆಪಿಎಸ್‌ಸಿ ಬದಲು ಕೆಇಎ ಮೂಲಕ ನೇಮಕಾತಿ ನಡೆಸುವಂತೆ ಆಗ್ರಹ ವ್ಯಕ್ತವಾಗಿರುವ ಕುರಿತು ಮಾತನಾಡಿದ ಎ. ಮಂಜು, ತಮ್ಮ ಸಚಿವ ಅವಧಿಯಲ್ಲಿ 650 ಪಶುವೈದ್ಯರನ್ನು ನೇರ ನೇಮಕಾತಿ ಮಾಡಿದ್ದನ್ನು ನೆನಪಿಸಿದರು.

"ಕೆಪಿಎಸ್‌ಸಿಗೆ ನೇಮಕಾತಿ ಕೊಟ್ಟರೆ ಹಣದ ವ್ಯಾಪಾರ ನಡೆಯುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಪಶುವೈದ್ಯರ ಹುದ್ದೆಗೆ ?80 ಲಕ್ಷ ಕೇಳುತ್ತಿದ್ದಾರೆ ಎನ್ನುವುದು ಗಂಭೀರ ವಿಷಯ. ಇಷ್ಟು ಹಣ ಕೊಟ್ಟು ಉದ್ಯೋಗ ಪಡೆದವರು ರೈತರಿಂದ ಸುಲಿಗೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು. ಆದ್ದರಿಂದ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಪಾರದರ್ಶಕ ನೇಮಕಾತಿ ನಡೆಯಬೇಕು," ಎಂದು ಆಗ್ರಹಿಸಿದರು.

> "ಹಿಂದೆ ಕೆಲಸ ಮಾಡಲು ಅವಕಾಶ ಕೊಡಲಿಲ್ಲ ಎಂದು ನಮ್ಮ ಪಕ್ಷದವರನ್ನೇ ಟೀಕಿಸುತ್ತಿದ್ದರು. ಈಗ ಸಚಿವ ಸ್ಥಾನ ಸಿಕ್ಕಿದೆ. ಜಿಲ್ಲೆಯ ಅಭಿವೃದ್ಧಿಗೆ ಕೆಲಸ ಮಾಡಿ ಒಳ್ಳೆಯ ಹೆಸರು ತಂದುಕೊಳ್ಳಲಿ. ನಮ್ಮ ಸಹಕಾರಮೂ ಇರುತ್ತದೆ. ನಮ್ಮನ್ನು ಉಪಯೋಗಿಸಿಕೊಳ್ಳಬೇಕು,"
> **- ಎ. ಮಂಜು, ಮಾಜಿ ಸಚಿವ**

## ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ಜಾರಿ ಮಾಡದಿದ್ದರೆ ಹೋರಾಟ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು ಎರಡೂವರೆ ಲಕ್ಷ ನೌಕರರಿಗೆ ಪರಿಷ್ಕೃತ ಕನಿಷ್ಠ ವೇತನ ಜಾರಿ ಮಾಡಲೇಬೇಕು ಎಂದು ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಅಕ್ಷಯ್‌ಗೌಡ ಒತ್ತಾಯಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆದರೆ ಯಾವುದೇ ಕಾರಣಕ್ಕೂ ಆದೇಶ ಹಿಂಪಡೆಯಬಾರದು. ಕಳೆದ ಜು.29 ರಂದು ಆರ್ಥಿಕ ಇಲಾಖೆಯು ಹೊರಡಿಸಿದ ಜ್ಞಾಪನಾ ಪತ್ರ ನಿರಾಸೆ ತರಿಸಿದೆ ಎಂದರು.

ರಾಜ್ಯದ ಆರೋಗ್ಯ, ವೈದ್ಯಕೀಯ ಶಿಕ್ಷಣ ಹಾಗೂ ಆಯುಷ್ ಇಲಾಖೆಗಳಲ್ಲೇ ಸುಮಾರು 25 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರು ಸೇವೆ ಸಲ್ಲಿಸುತ್ತಿದ್ದಾರೆ.



ಸರ್ಕಾರವು ಕಳೆದ ಮೇ 22 ರಂದು ಕನಿಷ್ಠ ವೇತನ ಪರಿಷ್ಕರಣೆ ಮಾಡಿರುವುದು ಕಾರ್ಮಿಕರ ಬಹುಕಾಲದ ಅಂದರೆ ಸುಮಾರು 8 ವರ್ಷಗಳ ಬೇಡಿಕೆಗೆ ದೊರೆತ ನ್ಯಾಯವಾಗಿತ್ತು.

ಆದರೆ ಆರ್ಥಿಕ ಇಲಾಖೆ ಜುಲೈ 15 ರಂದು ಹೊರಡಿಸಿದ ಜ್ಞಾಪನಾ ಹಾಗೂ ಜುಲೈ 29 ರಂದು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಪ್ರಧಾನ ನಿರ್ದೇಶಕರು ಹೊರಡಿಸಿದ ಸುತ್ತೋಲೆ ನೌಕರರಲ್ಲಿ ಆತಂಕ ಉಂಟುಮಾಡಿದೆ ಎಂದು ಆರೋಪಿಸಿದರು.

ಪರಿಷ್ಕೃತ ಕನಿಷ್ಠ ವೇತನವನ್ನು ಮರು ಪರಿಶೀಲಿಸುವ ಅಥವಾ ಹಿಂಪಡೆಯುವ ಯಾವುದೇ ಪ್ರಯತ್ನ ಕಾರ್ಮಿಕ ವಿರೋಧಿ ಕ್ರಮವಾಗಿದೆ. ಸರ್ಕಾರದ ಈ ನಿಲುವು ನೌಕರರಲ್ಲಿ ತೀವ್ರ ನಿರಾಸೆ ಮೂಡಿಸಿದೆ. ಒಂದೆಡೆ ಖಾಸಗಿ ಸಂಸ್ಥೆಗಳು ವೇತನ ಜಾರಿಗೆ ಹಿಂದೇಟು ಹಾಕುತ್ತಿದ್ದರೆ, ಸರ್ಕಾರವೇ ಜಾರಿಗೊಳಿಸಿದ ವೇತನವನ್ನು ನೀಡಲು ಹಿಂದೇಟು ಹಾಕುತ್ತಿರುವುದು ದುರದೃಷ್ಟಕರ ಎಂದರು.

ಲಕ್ಷಾಂತರ ಹೊರಗುತ್ತಿಗೆ ನೌಕರರ ಬದುಕು ಮತ್ತು ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕೃತ ಕನಿಷ್ಠ ವೇತನವನ್ನು ಯಾವುದೇ ಕಾರಣಕ್ಕೂ ಹಿಂಪಡೆಯಬಾರದು ಹಾಗೂ ಮರು ಪರಿಶೀಲನೆ ನಡೆಸಬಾರದು ಎಂದು ಆಗ್ರಹಿಸಿದ ಅವರು, ಸರ್ಕಾರ ವಾಪಸ್ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ರಾಜ್ಯದ ಎಲ್ಲಾ ಇಲಾಖೆಗಳ ಹೊರಗುತ್ತಿಗೆ ನೌಕರರು ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳು ರಾಜ್ಯವ್ಯಾಪಿ ಉಗ್ರ ಹೋರಾಟ ಆರಂಭಿಸಲಿವೆ ಎಂದು ಎಚ್ಚರಿಸಿದರು.

ಅಲ್ಲದೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುವ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಸುದರ್ಶನ್, ಕುಮಾರ್, ದಿಲೀಪ್, ಲೋಕೇಶ್, ಶೃತಿ ಇದ್ದರು.

## ದೇವಿ ಚಾಮುಂಡೇಶ್ವರಿ ಕೃಪೆಯಿಂದ ನಾಡು, ಕ್ಷೇತ್ರ ಸುಭಿಕ್ಷವಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಮಳಲಿ ಗ್ರಾಮದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆದ ದೇವಿ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವದಲ್ಲಿ ಶಾಸಕ 'ಸಿಮೆಂಟ್' ಮಂಜು ಅವರು ಭಾಗವಹಿಸಿ, ವಿಶೇಷ ಪೂಜೆ ಸಲ್ಲಿಸಿ ದೇವಿಯ ದರ್ಶನ ಪಡೆದರು.

ಬಳಿಕ ಮಾತನಾಡಿದ ಅವರು, "ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಸೌಹಾರ್ದತೆ, ಶಾಂತಿ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಚಾಮುಂಡೇಶ್ವರಿ ದೇವಿಯ ಆಶೀರ್ವಾದದಿಂದ ರಾಜ್ಯ ಹಾಗೂ ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ಉತ್ತಮ ಮಳೆ, ಸಮೃದ್ಧ ಬೆಳೆಯಾಗಲಿ. ಜನರಿಗೆ ಆರೋಗ್ಯ, ನೆಮ್ಮದಿ ದೊರಕಿ ಸದಾ ಅಭಿವೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸಿದ್ದೇನೆ" ಎಂದರು.



"ಹಿಂದೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಾಯಂದಿರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕುಟುಂಬದಲ್ಲಿ ಮಕ್ಕಳಿಗೆ ಧಾರ್ಮಿಕ ಸಂಸ್ಕಾರ, ಭಾರತೀಯ ಸಂಸ್ಕೃತಿ ಹಾಗೂ ಸನಾತನ ಮೌಲ್ಯಗಳನ್ನು ಬಿತ್ತುವ ಕೆಲಸವನ್ನು ತಾಯಂದಿರು ಮಾಡುತ್ತಿದ್ದಾರೆ. ಅವರಿಂದಲೇ ನಮ್ಮ ಧರ್ಮದ ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳು ತಲೆಮಾರಿನಿಂದ ತಲೆಮಾರಿಗೆ ಉಳಿದು ಬೆಳೆಯುತ್ತಿವೆ. ಆದ್ದರಿಂದ ತಾಯಂದಿರ ಕೊಡುಗೆಯನ್ನು ಸಮಾಜ ಸದಾ ಗೌರವಿಸಬೇಕು" ಎಂದು ಅವರು ಬಣ್ಣಿಸಿದರು.

"ನಾಡಿನ ಸುಭಿಕ್ಷತೆ ಮತ್ತು ಜನರ ಒಳಿತಿಗಾಗಿ ದೇವಸ್ಥಾನಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ನಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ, ಬೆಳೆಸಬೇಕು" ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯ ಪದಾಧಿಕಾರಿಗಳು, ಅರ್ಚಕರು, ಗ್ರಾಮಸ್ಥರು ಹಾಗೂ ಭಕ್ತಾದಿಗಳು ಶಾಸಕ ಸಿಮೆಂಟ್ ಮಂಜು ಅವರನ್ನು ಸ್ವಾಗತಿಸಿ ಗೌರವಿಸಿದರು. ವಿಶೇಷ ಪೂಜೆಯ ಬಳಿಕ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು. ಮಹೋತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

## ರೈತರ ಬದುಕು ಉಳಿಸಲು ಹೇಮಾವತಿಯಿಂದ ತಕ್ಷಣ ನೀರು ಹರಿಸಿ: ಶಾಸಕ 'ಸಿಮೆಂಟ್' ಮಂಜು ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ / ಗೊರೂರು: ಮಳೆ ಕೊರತೆಯಿಂದ ಕಂಗಾಲಾಗಿರುವ ರೈತರ ನೆರವಿಗೆ ಧಾವಿಸುವಂತೆ ಹಾಗೂ ಜಾನುವಾರುಗಳ ಕುಡಿಯುವ ನೀರಿಗಾಗಿ ಹೇಮಾವತಿ ಜಲಾಶಯದಿಂದ ತಕ್ಷಣವೇ ನಾಲೆಗಳಿಗೆ ನೀರು ಬಿಡುಗಡೆ ಮಾಡುವಂತೆ ಶಾಸಕ 'ಸಿಮೆಂಟ್' ಮಂಜು ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಗೊರೂರಿನಲ್ಲಿ ಹೇಮಾವತಿ ಜಲಾಶಯದ ಮುಖ್ಯ ಇಂಜಿನಿಯರ್‌ಗೆ ಬಿಜೆಪಿ ರೈತ ಮೋರ್ಚಾ ವತಿಯಿಂದ ಮನವಿ ಪತ್ರ ಸಲ್ಲಿಸಿದ ಬಳಿಕ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಮಳೆಯ ಅಭಾವದಿಂದಾಗಿ ಅನ್ನದಾತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ರೈತರ ಹಿತದೃಷ್ಟಿಯಿಂದ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಮಳೆ ಕೈಕೊಟ್ಟಿರುವ ಕಾರಣ ಈಗಾಗಲೇ ರೈತರ ಪ್ರಮುಖ ಬೆಳೆಯಾದ ಆಲೂಗಡ್ಡೆ ಸಂಪೂರ್ಣವಾಗಿ ಕೈತಪ್ಪಿದೆ. ಮತ್ತೊಂದೆಡೆ, ಉಳಿದಿರುವ ಜೋಳದ ಬೆಳೆಗೂ 'ಬಿಳಿ ಸುಳಿ' ರೋಗದ ಕಾಟ ಶುರುವಾಗಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಕೈಗೆ ಬಂದಿರುವ ಅಲ್ಪಸ್ವಲ್ಪ ಬೆಳೆಯನ್ನಾದರೂ ಉಳಿಸಿಕೊಳ್ಳಲು ತಕ್ಷಣವೇ ನೀರು ಹರಿಸುವುದು ಅನಿವಾರ್ಯವಾಗಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಹೇಮಾವತಿ ಜಲಾಶಯ ಇನ್ನೂ ಸಂಪೂರ್ಣವಾಗಿ ಭರ್ತಿಯಾಗಿಲ್ಲ ಎಂಬುದು ನಿಜ. ಆದರೆ, ಮಳೆಯಿಲ್ಲದೆ ಹಳ್ಳಿಗಳಲ್ಲಿ ಕೆರೆ-ಕಟ್ಟೆಗಳು ಸಂಪೂರ್ಣವಾಗಿ ಬತ್ತಿ ಹೋಗಿವೆ. ಇದರಿಂದಾಗಿ ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಅಭಾವ ಸೃಷ್ಟಿಯಾಗಿದೆ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ನೀರು ಬಿಡುಗಡೆ ಮಾಡಲು ವಿಳಂಬ ಮಾಡಿದರೆ, ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಶಾಸಕರು ಎಚ್ಚರಿಸಿದರು.

## ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಕೆಯುಡಬ್ಲ್ಯೂಜೆ ಒತ್ತಾಯ : ಸರ್ಕಾರ ಸ್ಪಂದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಯೋಜನೆ ಜಾರಿಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಉಚಿತ ಬಸ್ ಪಾಸ್ ಕಮಿಟಿ ಸಭೆಯನ್ನು ಆ.6ರಂದು ನಡೆಸಲು ಸರ್ಕಾರ ನಿರ್ಧರಿಸಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಸಲ್ಲಿಸಿದ್ದ ಮನವಿಗೆ ಸ್ಪಂದಿಸಿ ಸರ್ಕಾರ ಈ ಮಹತ್ವದ ಕ್ರಮ ಕೈಗೊಂಡಿದೆ.

ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಯೋಜನೆಯನ್ನು ಕೂಡಲೇ ಜಾರಿಗೆ ತರಬೇಕು ಹಾಗೂ ಬಸ್ ಪಾಸ್ ಕಮಿಟಿ ಸಭೆಯನ್ನು ತಕ್ಷಣ ಕರೆಯಬೇಕು ಎಂದು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಟಿ.ವಿ.ಶಿವಾನಂದ ತಗಡೂರು ಅವರು ಕಳೆದ ಜುಲೈ 30 ರಂದು ಸರ್ಕಾರಕ್ಕೆ ಪತ್ರ ಬರೆದು ಆಗ್ರಹಿಸಿದ್ದರು. ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ, ಆಗಸ್ಟ್ 6 ರಂದು ಕಮಿಟಿ ಸಭೆ ನಡೆಸಲು ತೀರ್ಮಾನಿಸಿರುವುದು ಗ್ರಾಮೀಣ ಪತ್ರಕರ್ತರಿಗೆ ಆಶಾದಾಯಕ ಬೆಳವಣಿಗೆಯಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು, ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಯೋಜನೆ ಶೀಘ್ರದಲ್ಲೇ ಅನುಷ್ಠಾನಗೊಳ್ಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಮಿಟಿ ಸಭೆಯಲ್ಲಿ ಅಗತ್ಯ ನಿರ್ಧಾರ ಕೈಗೊಂಡು, ಅರ್ಹ ಪತ್ರಕರ್ತರಿಗೆ ಯಾವುದೇ ವಿಳಂಬವಿಲ್ಲದೆ ಬಸ್ ಪಾಸ್ ವಿತರಣೆ ಪ್ರಕ್ರಿಯೆ ಆರಂಭಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## ನಾಳೆಯಿಂದ 3 ದಿನ ಉಚಿತ ಆರೋಗ್ಯ ತಪಾಸಣಾ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಇಂಡಿಯಾನಾ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್ ಹಾಗೂ ವಾಸನ್ ಐ ಕೇರ್ ಆಸ್ಪತ್ರೆ ಸಹಯೋಗದಲ್ಲಿ ಸಾರ್ವಜನಿಕರಿಗಾಗಿ ಆಗಸ್ಟ್ 5, 6 ಮತ್ತು 7 ರಂದು ಮೂರು ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಶಿಬಿರದಲ್ಲಿ ಸಂಪೂರ್ಣ ರಕ್ತ ಪರೀಕ್ಷೆ, ಯಕೃತ್ ಕಾರ್ಯಪರೀಕ್ಷೆ, ಮೂತ್ರಪಿಂಡ ಕಾರ್ಯಪರೀಕ್ಷೆ, ರಕ್ತದ ಸಕ್ಕರೆ ಪರೀಕ್ಷೆ (ಉಪವಾಸ), ಇಸಿಜಿ, ಎಕೋ, ಸಂಪೂರ್ಣ ಕಣ್ಣಿನ ತಪಾಸಣೆ ಹಾಗೂ ತಜ್ಞ ವೈದ್ಯರ ಉಚಿತ ಸಲಹೆ ಸೇರಿದಂತೆ ವಿವಿಧ ಆರೋಗ್ಯ ಸೇವೆಗಳನ್ನು ಯಾವುದೇ ಶುಲ್ಕವಿಲ್ಲದೆ ಸಾರ್ವಜನಿಕರಿಗೆ ಒದಗಿಸಲಾಗುತ್ತದೆ.

ಪ್ರತಿದಿನ ಬೆಳಿಗ್ಗೆ 11 ರಿಂದ ಸಂಜೆ 6 ಗಂಟೆ ವರೆಗೆ ಶಿಬಿರ ನಡೆಯಲಿದ್ದು, ನಗರದ ಕೆ.ಆರ್.ಪುರಂ 5ನೇ ಕ್ರಾಸ್‌ನ ಸಂಜೀವಿನಿ ಆಸ್ಪತ್ರೆ ಪಕ್ಕದ ಗೀತಾ ಸ್ಕ್ಯಾನಿಂಗ್ ಸೆಂಟರ್ ಮೇಲ್ಭಾಗದ ವಿಜಿ ಕಾಂಪ್ಲೆಕ್ಸ್‌ನ 1ನೇ ಮಹಡಿಯಲ್ಲಿರುವ ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಇಲ್ಲಿ ಶಿಬಿರ ನಡೆಯಲಿದೆ.

ಸಾರ್ವಜನಿಕರು ನೇರವಾಗಿ ಶಿಬಿರಕ್ಕೆ ಭೇಟಿ ನೀಡಿ ಉಚಿತ ಆರೋಗ್ಯ ತಪಾಸಣೆಯ ಸೌಲಭ್ಯ ಪಡೆಯಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

# ಹಳೇಬೀಡು ಅವ್ಯವಸ್ಥೆಗೆ ಡಿಸಿ ಚಾಟಿ

## ಗೂಡಂಗಡಿ, ತ್ಯಾಜ್ಯ ತೆರವಿಗೆ ಗಡುವು





**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು:ಹೊಯ್ಸಳೇಶ್ವರ ದೇವಾಲಯದ ಸುತ್ತ ಗೂಡಂಗಡಿ ತೆರವು ಮಾಡಿ ಸ್ವಚ್ಛ ಪರಿಸರ ನಿರ್ಮಿಸಬೇಕು ಅಧಿಕಾರಿ ವರ್ಗ ಜಾಗೃತರಾಗಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚಿಸಿದರು.

ಮಂಗಳವಾರ ಅವರು ಹಳೇಬೀಡಿಗೆ ಆಗಮಿಸಿದಾಗ ಹೊಯ್ಸಳೇಶ್ವರ ದೇವಾಲಯದ ಸುತ್ತಲಿನ ಪಾದಚಾರಿ ಮಾರ್ಗದಲ್ಲಿ ಅಡೆತಡೆ ಇರಬಾರಾದು. ಪ್ರವಾಸಿಗರು ಮುಕ್ತವಾಗಿ ಓಡಾಡುವಂತಿರಬೇಕು. ದೇವಾಲಯದ ಕಾಂಪೌಂಡ್ ಪಕ್ಕದಲ್ಲಿರುವ ಅಂಗಡಿ, ಮುಂಗಟ್ಟುಗಳನ್ನು ತೆರವು ಮಾಡಲು ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಯರು ಶೀಘ್ರ ಕ್ರಮ ಕೈಗೊಳ್ಳಬೇಕು. ಎಂದರು.

ಕೆರೆ ಕೋಡಿಗೆ ತ್ಯಾಜ್ಯ ಸುರಿದಿರುವುದು ಕೊನೆಯಾಗಬೇಕು. ಕೆರೆ ಕೋಡಿ ಹಾಗೂ ಹಳ್ಳಕ್ಕೆ ಕಸ ಸುರಿಯದಂತೆ ಎತ್ತರವಾಗಿ ಪೆನ್ಸಿಂಗ್ ಮಾಡಬೇಕು. ಸಂತೆ ಮೈದಾನದಿಂದ ಹೊರಗೆ ರಸ್ತೆ ಬದಿಯಲ್ಲಿ ಅಂಗಡಿ ಜೋಡಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಹಳೇಬೀಡು ಮುಖ್ಯರಸ್ತೆಯ ಕಾಮಗಾರಿ ತೀರಾ ವಿಳಂಭವಾಗಿದೆ. ಕಳೆದ 6 ತಿಂಗಳ ಹಿಂದಿಗೆ ಹಳೇಬೀಡಿಗೆ ಬೇಟಿ ನೀಡಿದಾಗ ಕಾಮಗಾರಿ ಚುರುಕುಗೊಳಿಸಲು ಸೂಚಿಸಿದ್ದೇವು. ಆದರೂ ಪರಿಪೂರ್ಣ ಕೆಲಸ ಆಗಿಲ್ಲ. ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿರುವ ಕೆರೆಯಂತಹ ಗುಂಡಿ ಅಪಘಾತಕ್ಕೆ ಅಹ್ವಾನ ನೀಡುತ್ತಿದೆ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ದ್ವಾರಸಮುದ್ರ ಕೆರೆಯ ಹಳೇಯ ಸೇತುವೆಯನ್ನು ಸಂರಕ್ಷಿಸಬೇಕು. ಕೋಡಿಯಲ್ಲಿ ಹೊಸದಾಗಿ ಹಾಕಿರುವ ಕಾಂಕ್ರೀಟ್ ತೆಗೆದು, ಹಿಂದೆ ಇದ್ದಂತಹ ಹಳೇಯ ಕಲ್ಲುಗಳ ಮರು ಜೋಡಣೆ ಜೋಡಣೆ ಮಾಡಿ ಬಂದೋಬಸ್ತ್ ಮಾಡಬೇಕು. ಕೆರೆ ಸೌಂಧರ್ಯ ಹೆಚ್ಚುವಂತೆ ಮಾಡಿದರೆ ದೂರದಿಂದ ಆಗಮಿಸಿದ ಪ್ರವಾಸಿಗರ ಮನಸ್ಸಿಗೆ ಹಿತದೊರಕುತ್ತದೆ ಎಂದರು.

ಜೈನಬಸದಿ, ಕೇದಾರೇಶ್ವರ ದೇವಾಲಯದ ಬಳಿ ಶೌಚಾಲಯ ನಿರ್ಮಿಸಲು ಕೇಂದ್ರ ಪುರಾತತ್ವ ಸರ್ವೇಕ್ಷಣೆಯ ಅಧಿನಿಯಮ ಅಡ್ಡಿಯಾಗಿದೆ. ಎರಡೂ ದೇವಾಲಯಗಳ ಬಳಿ ಸ್ವಚ್ಛತೆಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳುತ್ತೇವೆ. ಪ್ರವಾಸಿಗರಿಗೆ ಸಮರ್ಪಕ ಮಾಹಿತಿ ನೀಡುವಂತಹ ಆಕರ್ಷಕವಾದ ಫಲಕಗಳನ್ನು ಹಾಕಬೇಕು ಎಂದು ಜಿಲ್ಲಾಧಿಕಾರಿ ಪ್ರವಾಸೋಧ್ಯಮ ಅಧಿಕಾರಿಗಳಿಗೆ ಸೂಚಿಸಿದರು.

ವಾಸದ ಮನೆ ದುರಸ್ತಿಗೆ ಬಸ್ತಿಹಳ್ಳಿ ಜನರ ಆಗ್ರಹ.

ಜೈನಬಸದಿಯ ಮುಂಭಾಗ, ಹೊಯ್ಸಳೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಬಸ್ತಿಹಳ್ಳಿ ಗ್ರಾಮದಲ್ಲಿ ಹಳೇಯ ಮನೆ ದುರಸ್ತಿ ಮಾಡಿಕೊಳ್ಳಲು ಕೇಂದ್ರ ಪುರಾತತ್ವ ಇಲಾಖೆಯವರು ಅವಕಾಶಕೊಡುತ್ತಿಲ್ಲ. ಬೇರೆ ಜಾಗದಲ್ಲಿಯೂ ಪುನರ್ವಸತಿ ಕಲ್ಪಿಸುತ್ತಿಲ್ಲ. ಹೊಸ ಮನೆ ಕಟ್ಟುವುದಕ್ಕೂ ಅವಕಾಶ ಕೊಡುತ್ತಿಲ್ಲ. ಸೂರಿಗಾಗಿ ಪರದಾಡುವಂತಾಗಿದೆ ಎಂದು ಬಸ್ತಿಹಳ್ಳಿ ನಿವಾಸಿ ಮುರುಳಿ ಮನವಿ ಮಾಡಿದರು. ಈ ಕುರಿತು ಪರಿಶೀಲನೆ ನಡೆಸಲು ಪುರಾತತ್ವ ಇಲಾಖೆ ಅಧಿಕಾರಿಗಳೊಂದಿಗೆ ಮಾತನಾಡುತ್ತೇವೆ ಎಂದು ಜಿಲ್ಲಾಧಿಕಾರಿ ಲತಾಕುಮಾರಿ ತಿಳಿಸಿದರು.

ರಾತ್ರಿ 7 ಗಂಟೆ ನಂತರ ಹಾಸನಕ್ಕೆ ಬಸ್ ಸೌಲಭ್ಯ ಇಲ್ಲದೆ ಪ್ರಯಾಣಿಕರು ಪರದಾಡುವಂತಾಗಿದೆ. ಊರಾಚೆ ಇರುವ ಸರ್ಕಾರಿ ಪ್ರಥಮ ಧರ್ಜೆ ಕಾಲೇಜು ಬಳಿ ಕೆಲವು ಚಾಲಕರು ಬಸ್ ನಿಲುಗಡೆ ಮಾಡುವುದಿಲ್ಲ ಎಂದು ಸಾರ್ವಜನಿಕರು ಮನವಿ ಮಾಡಿದರು. ಸಾರಿಗೆ ಸಂಸ್ಥೆಯ ಚಿಕ್ಕಮಗಳೂರು ವಿಭಾಂಗೀಯ ನಿಯಂತ್ರಕರಿಗೆ ದೂರವಾಣಿ ಕರೆ ಮಾಡಿ ಸಿಬ್ಬಂದಿ ಪ್ರಯಾಣಿಕರ ಸ್ನೇಹಿಗಳಂತೆ ಕೆಲಸ ಮಾಡಬೇಕು. ರಾತ್ರಿ ಬಸ್ ವ್ಯವಸ್ಥೆ ಹಾಗೂ ಡಿಗ್ರಿ ಕಾಲೇಜು ಬಳಿ ಬಸ್ ನಿಲ್ಲುವ ವ್ಯವಸ್ಥೆ ಮಾಡಿ ಎಂದು ತಿಳಿಸಿದರು.

ಬೇಗ ನಿವೇಶನ ಕೊಡಿಸಿ ಭೂಗುಂಡಿ ನಿರಾಶ್ರಿತರು

ದ್ವಾರಸಮುದ್ರ ಕೆರೆ ಕೋಡಿಹಳ್ಳದ ಹಾಸುಪಾಸಿನ ಭೂದಿಗುಂಡಿ ಹಿಂದೆ ನೆರೆ ಹಾವಳಿಯಿಂದ ಮೂರು ಮನೆ ಕೊಚ್ಚಿ ಹೋದವು. ಭೂದಿಗುಂಡಿ ಬಡಾವಣೆ ಮುಳುಗುವ ಸ್ಥಿತಿಗೆ ಬಂದಿತ್ತು. 175 ನಿರಾಶ್ರಿತ ಕುಟುಂಬಗಳಿಗೆ ಒಂಟೆಮಳ್ಳಿ ಗುಡ್ಡದಲ್ಲಿ ಪುನರ್ವಸತಿ ಕಲ್ಪಿಸಲು ಜಾಗ ನಿಗಧಿ ಮಾಡಿದರು. ಜಮೀನು ಸಮತಟ್ಟು ಮಾಡಿ ನಿವೇಶನ ಹಂಚಿಕೆ ಮಾಡುವ ಕೆಲಸ ವಿಳಂಭವಾಗಿದೆ ಎಂದು ಭೂದಿಗುಂಡಿ ನಿವಾಸಿ ಮಂಜುನಾಥ ಮನವಿ ಮಾಡಿದರು.

ನಿವೇಶನ ಕೊಡಲು ಶೀಘ್ರವೇ ಕಾರ್ಯಪ್ರವೃತ್ತರಾಗಬೇಕು ಎಂದು ಸಕಲೇಶಪುರ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರಿಗೆ ಸೂಚಿಸಿದರು. ನಿವೇಶನ ಕೊಟ್ಟ ನಂತರ ಅಪಾಯದ ಭೂದಿಗುಂಡಿ ಪ್ರದೇಶದಲ್ಲಿ ಬೇರೆ ಯಾರು ಮನೆ ನಿರ್ಮಿಸದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ಪ್ರವಾಸೋಧ್ಯಮ ಇಲಾಖೆ ಉಪ ನಿರ್ದೇಶಕಿ ರೂಪಾ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಕ್ಯೂರೈಟರ್ ಕುಮಾರ್.ಎಚ್.ಸಿ, ಕೇಂದ್ರ ಪುರಾತತ್ವ ನೌಕರ ಕುಮಾರಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣ, ಪತ್ರಕರ್ತರಾದ ಎಚ್.ಎಸ್.ಅನಿಲ್ ಕುಮಾರ್. ರಘುನಾಥ, ಎಂ.ಸಿ.ಕುಮಾರ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಬಿ.ಎಸ್.ಸೋಮಶೇಖರ್, ಪುರಾತತ್ವ ನೌಕರ ಕುಮಾರಸ್ವಾಮಿ ಪಾಲ್ಗೊಂಡಿದ್ದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾವಿನಕೆರೆ: ಬಡವರ ಪಾಲಿನ ಅನ್ನಪೂರ್ಣೇಶ್ವರಿ, ಮಾತೃಸ್ವರೂಪಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ 72 ವರ್ಷಗಳ ಸುದೀರ್ಘ ದಾಂಪತ್ಯ ಜೀವನದಲ್ಲಿ ಬೆನ್ನೆಲುಬಾಗಿ ನಿಂತಿದ್ದ ದಿ. ಚೆನ್ನಮ್ಮ ಅವರ ಸಮಾಧಿ ಸ್ಥಳದಲ್ಲಿ ಅವರ ಸ್ಮರಣಾರ್ಥವಾಗಿ ಹಾಸನದ ಜನಪ್ರಿಯ ಆಸ್ಪತ್ರೆ ಮುಖ್ಯಸ್ಥ ಡಾ.ವಿ.ಕೆ. ಅಬ್ದುಲ್ ಬಶೀರ್ ಅವರ ನೇತೃತ್ವದಲ್ಲಿ ಆಯೋಜಿಸಿರುವ ಉಚಿತ ಆರೋಗ್ಯ ಶಿಬಿರಕ್ಕೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ.

ಈ ಸಮಾಜಮುಖಿ ಕಾರ್ಯವನ್ನು ಎಲ್ಲರೂ ಹೃತ್ಪೂರ್ವಕವಾಗಿ ಪ್ರಶಂಸಿಸಿದ್ದಾರೆ. ಮಾವಿನಕೆರೆ ಗ್ರಾಮದ ಶ್ರೀ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಚೆನ್ನಮ್ಮ ಅವರ ಸಮಾಧಿ ಸ್ಥಳಕ್ಕೆ ನಿತ್ಯ ರಾಜ್ಯದ ವಿವಿಧ ಭಾಗಗಳಿಂದ ಅಭಿಮಾನಿಗಳು, ಸಾರ್ವಜನಿಕರು ಹಾಗೂ ಭಕ್ತರು ಆಗಮಿಸುತ್ತಿದ್ದಾರೆ.

ದೂರದ ಊರುಗಳಿಂದ ಬರುವವರಿಗೆ ತುರ್ತು ಆರೋಗ್ಯ ಸೇವೆ ದೊರೆಯಬೇಕು ಎಂಬ ಉದ್ದೇಶದಿಂದ ಆ.1 ರಿಂದ ಒಂದು ವಾರಗಳ ಕಾಲ ಉಚಿತ ವೈದ್ಯಕೀಯ ಶಿಬಿರ ಆರಂಭಿಸಲಾಗಿದೆ.

ಶಿಬಿರದ ಎರಡನೇ ಮತ್ತು ಮೂರನೇ ದಿನವೂ ನೂರಾರು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಸೇವೆಯ ಸದುಪಯೋಗ ಪಡೆದುಕೊಂಡರು.

ವೈದ್ಯರ ತಂಡ ಸಾರ್ವಜನಿಕರಿಗೆ ಉಚಿತವಾಗಿ ರಕ್ತದೊತ್ತಡ (ಬಿಪಿ) ಹಾಗೂ ಮಧುಮೇಹ (ಶುಗರ್) ಪರೀಕ್ಷೆ ನಡೆಸಿ, ಅಗತ್ಯವಿರುವವರಿಗೆ ಉಚಿತ ಔಷಧಿ ವಿತರಿಸಿತು. ಆರೋಗ್ಯ ಸಮಸ್ಯೆ ಇರುವವರಿಗೆ ವೈದ್ಯರು ಸೂಕ್ತ ಸಲಹೆ ಮತ್ತು ಚಿಕಿತ್ಸೆ ಕುರಿತು ಮಾರ್ಗದರ್ಶನ ನೀಡಿದರು.

ಸಮಾಧಿ ಸ್ಥಳಕ್ಕೆ ಭೇಟಿ ನೀಡಿದ ಹಿರಿಯ ನಾಗರಿಕರು, ಮಹಿಳೆಯರು, ಯುವಕರು ಹಾಗೂ ಗ್ರಾಮೀಣ ಭಾಗದ ಜನರು ಈ ಆರೋಗ್ಯ ಶಿಬಿರದಿಂದ ಹೆಚ್ಚಿನ ಪ್ರಯೋಜನ ಪಡೆದರು.

ಸಮಾಧಿಗೆ ಬರುವ ಭಕ್ತರಿಗೆ ಉಚಿತವಾಗಿ ಆರೋಗ್ಯ ಸೇವೆ ಒದಗಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದು ಅನೇಕರು ಅಭಿಪ್ರಾಯಪಟ್ಟರು.

ಡಾ.ವಿ.ಕೆ. ಅಬ್ದುಲ್ ಬಶೀರ್ ಅವರ ಸಮಾಜಮುಖಿ ಸೇವೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದು, ಆರೋಗ್ಯ ಸೇವೆ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ ಎಂದು ನಾಗರಿಕರು ಪ್ರಶಂಸೆ ವ್ಯಕ್ತಪಡಿಸಿದರು. ಇಂತಹ ಸೇವಾ ಕಾರ್ಯ ಸಮಾಜಕ್ಕೆ ಮಾದರಿಯಾಗಿದ್ದು, ಜನಪ್ರಿಯ ಆಸ್ಪತ್ರೆಯ ಈ ಪ್ರಯತ್ನವನ್ನು ಇತರೆ ಸಂಸ್ಥೆಗಳೂ ಅನುಸರಿಸಬೇಕು ಎಂದು ಸಾರ್ವಜನಿಕರು ಹೇಳಿದರು.

## ನಿರ್ಲಕ್ಷ್ಯ ತೋರಿದ ನ್ಯೂರೋಸರ್ಜನ್‌ಗೆ ದಂಡನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಯೋವೃದ್ಧರಿಗೆ ಶಸ್ತ್ರಚಿಕಿತ್ಸೆ ಮಾಡುವಾಗ ಲೋಪ ಎಸಗಿರುವುದು ಸಾಬೀತಾದ ಹಿನ್ನೆಲೆ ನ್ಯೂರೋಸರ್ಜನ್ ಡಾ.ಶ್ರೀ ಚೈತನ್ಯ ಆರ್.ಎಸ್.ಎಂಬ ವೈದ್ಯರನ್ನು 2 ತಿಂಗಳ ಕಾಲ ವೈದ್ಯಕೀಯ ನೋಂದಣಿ ಪಟ್ಟಿಯಿಂದ ತೆಗೆದುಹಾಕಲು ಕರ್ನಾಟಕ ಮೆಡಿಕಲ್ ಕೌನ್ಸಿಲ್ ಆದೇಶಿಸಿದೆ ಎಂದು ಹೊಳೆನರಸೀಪುರದ ಆರ್.ಸುಮಾ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದ್ಯರ ಜೊತೆಗೆ ಎನ್‌ಡಿಆರ್‌ಕೆ ಆಸ್ಪತ್ರೆ ವಿರುದ್ಧ ಅಗತ್ಯ ಕ್ರಮಕ್ಕಾಗಿ ಪ್ರಕರಣ ಕೆಪಿಎಂಇಎ ಹಾಸನಕ್ಕೆ ರವಾನಿಸಿದೆ ಎಂದರು.

2018 ರಲ್ಲಿ ನಮ್ಮ ತಂದೆ ಬಿ.ರಾಜು ದಿಡೀರ್ ಅಸ್ವಸ್ಥರಾಗಿದ್ದರು. ಕೂಡಲೇ ವೈದ್ಯರ ಬಳಿಗೆ ಓಡೋಡಿ ಬಂದು ಎನ್‌ಡಿಆರ್‌ಕೆ ಆಸ್ಪತ್ರೆಗೆ ದಾಖಲು ಮಾಡಿದೆವು. ಡಾ.ಚೈತನ್ಯ ಅವರೇ ಮೆದುಳಿನ ಶಸ್ತ್ರಚಿಕಿತ್ಸೆ ಮಾಡಿದರು. ಈ ವೇಳೆ ವೈದ್ಯರು ತಲೆಯ ಚಿಪ್ಪನ್ನು ಸಂರಕ್ಷಿಸದೇ ಎಲ್ಲೋ ಬಿಸಾಡಿ ಕರ್ತವ್ಯ ನಿರ್ಲಕ್ಷ್ಯ ತೋರಿದ್ದರೆ, ಆಡಳಿತ ಮಂಡಳಿಯೂ ಉಡಾಫೆ ತೋರಿತು ಎಂದರು.

ತಂದೆ ಪ್ರಾಣ ರಕ್ಷಣೆಗಾಗಿ ಬೇರೆ ಆಸ್ಪತ್ರೆ ಮೊರೆ ಹೋಗಿ ಚಿಕಿತ್ಸೆ ಕೊಡಿಸಿದೆವು. ಈ ನಡುವೆ ವೈದ್ಯರು ಮತ್ತು ಆಸ್ಪತ್ರೆಯ ಅನ್ಯಾಯದ ವಿರುದ್ಧ ಹೋರಾಡಲು ಕರ್ನಾಟಕ ವೈದ್ಯಕೀಯ ಮಂಡಳಿಗೆ ದೂರು ನೀಡಿದೆವು.

ಸಿಕ್ಕಿದೆ. ನ್ಯಾಯದ ಭರವಸೆ ಮೂಡಿದೆ. ನಾವೀಗ ವೈದ್ಯರ ವಿರುದ್ಧ ದೂರು ದಾಖಲಿಸಿ, ಪರಿಹಾರ ಕೋರಿ ನ್ಯಾಯಾಲಯದ ಮೆಟ್ಟಿಲೇರಲು ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

ಇಂಥ ಪ್ರಕರಣಗಳಲ್ಲಿ ನೊಂದವರು ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ದೂರು ನೀಡಿದರೆ ಖಂಡಿತಾ ನ್ಯಾಯ ಸಿಗಲಿದೆ.

ಡಾ. ಶ್ರೀ ಚೈತನ್ಯ ವಿರುದ್ಧ ವೃತ್ತಿಪರ ದುರ್ನಡತೆ ಹಾಗೂ ವೈದ್ಯಕೀಯ ನಿರ್ಲಕ್ಷ್ಯ ಸಾಬೀತಾಗಿದೆ ಎಂದು ತೀರ್ಮಾನಿಸಿ ವೈದ್ಯರ ಹೆಸರನ್ನು

2 ತಿಂಗಳ ಕಾಲ ವೈದ್ಯಕೀಯ ನೋಂದಣಿ ಪಟ್ಟಿಯಿಂದ ಅಮಾನತುಗೊಳಿಸುವಂತೆ ಆದೇಶಿಸಿದೆ ಎಂದರು.

ಇದೇ ವೇಳೆ ಪ್ರಕರಣದಲ್ಲಿ ಪ್ರತಿವಾದಿಯಾಗಿರುವ ಎನ್‌ಡಿಆರ್‌ಕೆ ಆಸ್ಪತ್ರೆ ವಿರುದ್ಧ ಕಾನೂನು ಪ್ರಕಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪ್ರಾಧಿಕಾರ ಹಾಸನಕ್ಕೆ ಪ್ರಕರಣ ವರ್ಗಾಯಿಸಿದೆ ಎಂದು ತಿಳಿಸಿದರು.

## ಅಕ್ರಮ ಕಟ್ಟಡ ತೆರವುಗೊಳಿಸಲು ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ರಾಘವೇಂದ್ರ ಕಾಲೋನಿಯ ಬೀರನಹಳ್ಳಿ ಕೆರೆ ಹತ್ತಿರದ ಓ ಶಕ್ತಿ ದೇವಸ್ಥಾನದ ಮುಂಭಾಗದಲ್ಲಿರುವ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು,ಕೂಡಲೇ ಇದಕ್ಕೆ ತಡೆ ನೀಡಬೇಕೆಂದು ಕೋರಿ ಶ್ರೀರಾಮ ಸೇನೆಯಿಂದ ಹಾಸನ ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸದರಿ ಜಾಗಕ್ಕೆ ಶೀಘ್ರವೇ ಭೇಟಿ ನೀಡಿ ಕೂಡಲೇ ತೆರವುಗೊಳಿಸಬೇಕು. ಜಾಗವನ್ನು ಯಾವ ಉದ್ದೇಶಕ್ಕೆ ಮೀಸಲಿಡಲಾಗಿತ್ತು, ಈಗ ಯಾವ ಕಾಮಗಾರಿ ನಡೆಯುತ್ತಿದೆ, ಇದಕ್ಕೆ ಅನುಮತಿ ಕೊಟ್ಟವರು ಯಾರು ಎಂಬ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ನಿಗದಿತ ಜಾಗ ನಗರದ ನಾಗರಿಕರ ಉದ್ದೇಶಕ್ಕೆ ಬಳಕೆ ಆಗಬೇಕು. ಅದು ಸರ್ಕಾರಿ ಜಾಗ ಎಂದು ಬೋರ್ಡ್ ಅಳವಡಿಸಿದ್ದರೂ ಕಿತ್ತು ಹಾಕಿ ಕಟ್ಟಡ ಕಟ್ಟುತ್ತಿದ್ದಾರೆ.

ಕಟ್ಟಡ ಮಾಲೀಕರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಶ್ರೀರಾಮ್ ಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ, ನಗರಾಧ್ಯಕ್ಷ ದರ್ಶನ್, ಪ್ರತಿಮಾ ಹಾಸನ ದುರ್ಗಾ ಸೇನೆ ಗೋರಕ್ಷಕ ವಿನಯ ಕೆರೆಹಳ್ಳಿ, ಹಾಸನ ತಾಲೂಕು ಅಧ್ಯಕ್ಷ ಜಗದೀಶ್, ಪ್ರಧಾನ ಕಾರ್ಯದರ್ಶಿ ಮಹೇಶ್, ಕಾರ್ಮಿಕ ವಿಭಾಗದ

ದೊರೆಸ್ವಾಮಿ,ಜಿಲ್ಲಾ ಉಪಾಧ್ಯಕ್ಷ ಪ್ರದೀಪ್, ಶ್ರೀರಾಮಸೇನೆ ಕಾರ್ಯಕರ್ತರಾದ ವಿನೋದ್, ರವಿ, ವಿಜಿ ಕುಮಾರ, ಕಾಂತರಾಜ್, ರಾಷ್ಟ್ರ ರಕ್ಷಣಾ ಸೇನಾ ಸುರೇಶ್‌ಗೌಡ ಮೊದಲಾದವರಿದ್ದರು.

## ಲಲಿತಾ-7



**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-39

ಅಂದಿನಿಂದ ಪ್ರಾರಂಭವಾದ ಆ ಹೊಸಬದುಕು, ಸಹಜ ಅಡ್ಡಿ ಆತಂಕಗಳನ್ನು ಎದುರಿಸಿ ನಿಲ್ಲುವ ದೃಢತೆಯನ್ನು ಪಡೆಯುತ್ತಲೇಹೋಯ್ತು. ಗೆಳೆಯರಬಳಗದ ಪ್ರತಿಯೋರ್ವರಲ್ಲೂ ಮೇಷ್ಟ್ರುಗಿಡಾ ನೆಡೋ ನೆಪದಲ್ಲಿ ನಮ್ಮೂರ್ ಹುಡ್ಗೀನ್ನೂ ಪಟಾಯಿಸ್ಬಿಟ್ರು ಮಾರಾಯ ಎಂದು ಚಟಾಕಿ ಹಾರಲಾರಂಭಿತು. ಮೇಷ್ಟ್ರು ಬಗ್ಗೆ ಸದಭಿಪ್ರಾಯ ಹೊಂದಿದ್ದ ಊರಿನ ಹಿರಿಯರನೇಕರು ಈ ಸುದ್ದಿ ಕೇಳಿ ಅಚ್ಚರಿಯಿಂದ ಹುಬ್ಬೇರಿಸಿದ್ದೂ ಅಲ್ಲದೇ ''ಮೇಷ್ಟ್ರು ಭಲೇ ಪಾಕಡಾ ಇದಾನೆ ಮಾರಾಯ. ಇರ್ಲಿ ಬಿಡು, ಮನ್ಸಾ ಒಳ್ಳೋನೇ, ಮದ್ವೆ ಆಗೋದಾದ್ರೆ ಆಗ್ಲಿ ಬಿಡಿ. ಸರ್ಕಾರೀ ಕೆಲ್ಸಾನೂ ಇದೆ, ಅವರೂರಲ್ಲಿ ಒಂದಷ್ಟು ಜಮೀನು ಇದೆಯಂತಲ್ಲ. ಹುಡ್ಗಿ ಇನ್ನೂ ಓದ್ತಾ ಐತಂತಲಾ. ಆದ್ರೂ, ಮೇಷ್ಟ್ರು ಯಾಕೋ ಅರ್ಜೆಂಟು ಮಾಡ್ದಂಗೆ ಕಾಣ್ತೈತೆ'' ಎಂದು ಷರಾ ಬರೆದರು. ಇನ್ನೊಂದಷ್ಟು ಜನ ತಮ್ಮ ಕಡೆಯ ಯಾವುದಾದರೂ ಹುಡುಗಿಗೆ ಗಂಟುಹಾಕಲು ಅಂದಾಜು ಮಾಡಿಕೊಂಡಿದ್ದವರು, ''ಮಳ್ಳನಂಗೆ ಕಾಣ್ತಿದ್ದ. ನೈಸಾಗಿ ಮಾತಾಡಿ, ಮರುಳು ಮಾಡ್ಬಿಟ್ಟಿದಾನೆ. ಜೋಪಾನ, ಯಾರ್ನೂ ನಂಬಂಗಿಲ್ಲ. ಯಾವ್ನೋರೋ ಏನೋ. ಯಾವ್ಜಾತಿ ಅಂತೆ? ಏನುಕ್ಕೂ ನಾಲ್ಕಾರು ಕಡೆ ವಿಚಾರ್ಸಿ ತಿಳ್ಕೊಳ್ಳೋದೊಳ್ಳೇದು. ನಿಮ್ಮನೇಲೂ ವಯಸ್ಸಿಗೆ ಬಂದ ಹೆಣ್ಮಕ್ಳಿದಾರೆ, ಏನುಕ್ಕೂ ಜೋಪಾನ''ಎಂದು ನಮ್ಮೂದ್ದು ಒಂದಿರಲಿ ಎಂದು ಬಾಣ ಬಿಟ್ಟರು.

ಮೊಬೈಲುಗಳು ಇಲ್ಲದ ಆ ಕಾಲದಲ್ಲಿ ದಿನವೂ ಮಾತನಾಡಲು ಸಾಧ್ಯವಿಲ್ಲದ್ದರಿಂದ, ಪ್ರತಿದಿನ ರಾತ್ರಿ ಎಂಟೂ ಮೂವ್ವತ್ತಕ್ಕೆ ದೂರದರ್ಶನದಲ್ಲಿ ಪ್ರಸಾರವಾಗುತಿದ್ದ ಕಾರ್ಯಕ್ರಮವೇ ಇಬ್ಬರಿಗೂ ಒಬ್ಬರನ್ನೊಬ್ಬರು ನೋಡಲು ಮ್ಯೂಚುಯಲ್ ಸಿಗ್ನಲ್ಲು. ಆ ಕಾರ್ಯಕ್ರಮದ ಶೀರ್ಷಿಕೆಗೀತೆ ಆರಂಭವಾದೊಡನೆ ಆಕೆಯ ಮನೆಯ ಮಹಡಿಯ ಕೋಣೆಯ ಲೈಟು ಹೊತ್ತಿಕೊಳ್ಳುತಿತ್ತು. ಆ ಎರಡೂ ಕಿಟಕಿಗಳ ಮೂಲಕ ಹೊರಬರುವ ಬೆಳಕನ್ನೇ ಕಾಯುತ್ತಾ ಕುಳಿತಿರುತಿದ್ದ ಮೇಷ್ಟ್ರು ತನ್ನ ಮನೆಯಂಗಳದ ಸಿಮೆಂಟ್ ಬೆಂಚಿನ ಮೇಲೆ ಕುಳಿತೇ ಕವನ ಬರೆಯುತಿದ್ದ.

ಇಬ್ಬರಿಗೂ ದಣಿವಾಗುವಷ್ಟು ಹೊತ್ತು ಒಬ್ಬರನೊಬ್ಬರು ಆ ಕತ್ತಲಲ್ಲೇ ನೋಡಿಕೊಂಡ ಮೇಲೆ, ಕಿಟಕಿಗಳ ಹಿಂದಿನ ಬೆಳಕು ಆರುತಿತ್ತು. ಮೇಷ್ಟ್ರು ಅಲ್ಲೇ ಕುಳಿತಿರುತಿದ್ದರು, ಅವರಿಗೆ ಗೊತ್ತಿತ್ತು ಆ ಬೆಳಕು ಕೆಲವೇ ಕ್ಷಣಗಳಲ್ಲಿ ಮತ್ತೆ ಹೊರಸೂಸಲಿದೆ ಎಂದು. ಈ ರೀತಿಯ ಕಣ್ಣಾಮುಚ್ಚಾಲೆಯಾಟ ಹಲವಾರು ದಿನಗಳ ಕಾಲ ನಡೆಯಿತು. ಲಲಿತಾಳ ಒತ್ತಾಸೆಯಿಂದ ಅಂದಾನಿಯವರನ್ನು ಅವರದ್ದೇ ಮನೆಯಲ್ಲಿ ಭೇಟಿ ಮಾಡಿದ ಮೇಷ್ಟ್ರು ತನ್ನ ಪರಿಚಯ ಮಾಡಿಕೊಂಡು, ತನ್ನ ಹಾಗೂ ಅವರ ಮಗಳ ಸ್ನೇಹದ ವಿಚಾರವನ್ನೂ ತಿಳಿಸಿದರಲ್ಲದೇ ಅವರು ಸಮ್ಮತಿಸಿದರೆ ತಮ್ಮ ಮನೆಯಲ್ಲಿಯೂ ಮದುವೆಯ ಕುರಿತು ಮಾತನಾಡುವುದಾಗಿ ತಿಳಿಸಿದರು. ಅಂದಾನಿ ಮಹಾ ಪಾಕಡಾ ಮನುಷ್ಯ. ಈ ಮೇಷ್ಟ್ರು ತನ್ನ ಪರಿಚಯ ಮಾಡಿಕೊಳ್ಳುವುದಿರಲಿ, ಆತ ಈಗಾಗಲೇ ಮೇಷ್ಟ್ರ ಮನೆ, ಊರು, ಇತ್ಯೋಪರಿಗಳನ್ನೆಲ್ಲ ಆ ವೇಳೆಗಾಗಲೇ ಸಾಧ್ಯವಿದ್ದ ಮೂಲಗಳಿಂದ ಸಂಗ್ರಹಿಸಿಕೊಂಡಿದ್ದ. ಲಲಿತಳ ತಾಯಿ ಸಹ ಬಹು ಅಕ್ಕರೆಯಿಂದಲೇ ಅಳಿಯ ಆಗಲಿರುವವನನ್ನು ಉಪಚರಿಸಿದರು. ಸತಿ-ಪತಿ ಇಬ್ಬರೂ ಸೇರಿ ಅದೂ ಇದೂ ಮಾತನಾಡಿ ಅಡ್ಡ ಗೋಡೆಯ ಮೇಲೆ ದೀಪವಿರಿಸಿದರು. ವಿವಿಧ ಮೂಲಗಳಿಂದ ಗಿರೀಶ್ಮೇಷ್ಟ್ರ ಇನ್ನಷ್ಟು ವಿವರಗಳನ್ನು ಕ್ರೋಡೀಕರಿಸಿದರು. ಮಗಳ ಒತ್ತಾಯಕ್ಕೆ ಮೇಷ್ಟ್ರ ಕುಟುಂಬದೊಂದಿಗೂ ಮಾತನಾಡಿದರು. ಅವರ ಮನೆಯ ಕಾರ್ಯಕ್ರಮಗಳಿಗೆ ಇವರು, ಇವರ ಮನೆಯ ಕಾರ್ಯಗಳಿಗೆ ಅವರು ಹೋಗಿಯೂ ಬಂದರು.

ಅದೊಂದು ದಿನ ರಾತ್ರಿ ಒಂದೂವರೆಯ ಸಮಯದಲ್ಲಿ ಮೇಷ್ಟ್ರು ಮನೆಯ ಬಾಗಿಲ ಚಿಲಕ ಕಟಕಟಾಯಿಸಿತು. ಏನಿದು? ಯಾರಿಷ್ಟು ಹೊತ್ತಿನಲಿ? ಎಂದು ತಡಬಡಾಯಿಸಿ ಎದ್ದ ಮೇಷ್ಟ್ರು ಬಾಗಿಲು ತೆರೆದರೆ, ಎದುರಿನಲಿ ಲಲಿತಳ ತಾಯಿ! ಗಾಬರಿ ಹಾಗೂ ಉದ್ವೇಗದಿಂದ ಈ ಕೂಡಲೇ ಮನೆಗೆ ಬರುವಂತೆ ಒತ್ತಾಯಿಸಿದರು. ಏನೋ ಅನಾಹುತವಾಗಿರಬೇಕೆಂದು ಊಹಿಸಿದ ಮೇಷ್ಟ್ರು ತರಾತುರಿಯಲ್ಲಿ ಷರಟು, ಪ್ಯಾಂಟೇರಿಸಿದವರೇ ಒಂದೇ ಉಸಿರಿಗೆ ತಮ್ಮ ಮನೆಯಿಂದ ಸುಮಾರು ನೂರೈವತ್ತು ಮೀಟರು ದೂರವಿದ್ದ ಲಲಿತಾಳ ಮನೆಗೆ ದೌಡಾಯಿಸಿದರು. ಒಳಮನೆಯಲ್ಲಿ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದ ತಟ್ಟೆ-ಲೋmಗಳು, ಒಂದು ಮೂಲೆ ಕಿತ್ತು ಬಿದ್ದಿದ್ದ ಸೊಳ್ಳೆ ಪರದೆ, ಕಿತ್ತು ಹರಿದು ತನ್ನೊಳಗೆ ತುಂಬಿಕೊಂಡಿದ್ದ ಹತ್ತಿಯನ್ನೆಲ್ಲಾ ಮನೆಯಿಡೀ ಚೆಲ್ಲಿದ್ದ ದಿಂಬು, ನೆಲದಲ್ಲಿ ಪುಡಿಪುಡಿಯಾಗಿ ಚೆಲ್ಲಿ ಹೋಗಿದ್ದ ಟೀವೀ ರಿಮೋಟು, ಬಿದ್ದು ಉರುಳಿ ಹೋಗಿ ಮೂಲೆ ಸೇರಿದ್ದ ಕಾಫಿ ಫ್ಲಾಸ್ಕ್, ಬಾಗಿಲ ಸಂದಿಯಲ್ಲಿ ಮೊಳಕಾಲು ಮಡಿಸಿಕೊಂಡು, ಎರಡೂ ಕೈಗಳಲ್ಲಿ ಮೊಣಕಾಲೆರಡನ್ನೂ ಅವುಚಿಕೊಂಡಿದ್ದ ಲಲಿತಾ! ಏನಾಗಿರಬಹುದೆಂದು ಊಹಿಸಿದ ಮೇಷ್ಟ್ರು ಲಲಿತಳನ್ನು ಮಾತನಾಡಿಸಲು ಮುಂದಾದರು. ಅಷ್ಟರಲ್ಲಿ ಅವಳ ತಾಯಿ ''ಬೇಡ, ಬೇಡ, ಹತ್ತಿರ ಹೋಗಬೇಡಿ.

ನನ್ನನ್ನೂ ಸಹ ಹತ್ತಿರ ಬಿಟ್ಕೊಳ್ತಿಲ್ಲ. ಯಾರಾದ್ರೂ ಡಾಕ್ಟರು ಸಿಗುತ್ತಾರಾ ಈ ಹೊತ್ತಲ್ಲಿ ನೋಡಬೇಕು. ಇವಳ ಅಪ್ಪ ಸಹಾ ಊರಲ್ಲಿಲ್ಲ. ಎರಡು ದಿನದಿಂದ ಊಟ ಮಾಡಿಲ್ಲ. ಡಿಸೈಡ್ ಮಾಡಿ, ಈ ಕೂಡ್ಲೇ ಡಿಸೈಡ್ ಮಾಡಿ ಅಂತಿದಾಳೆ''.

ವಿಷಯ ಏನೆಂದು ಅರ್ಥ ಮಾಡಿಕೊಂಡ ಮೇಷ್ಟ್ರು ತನ್ನ ಸ್ನೇಹಿತ ಆನಂದನನ್ನು ಕರೆದುಕೊಂಡು ಸರ್ಕಾರಿ ಆಸ್ಪತ್ರೆಯ ಕ್ವಾರ್ಟರ್ಸಿಗೆ ಹೋದರು. ಹಿಸ್ಟಿರಿಕ್ ವ್ಯಕ್ತಿಗೆ ಉಪಚಾರದ ಅಗತ್ಯವಿದೆಯೆಂದು ಹೇಳಿ ಡಾಕ್ಟರನ್ನು ಕರೆದುಕೊಂಡು ಬಂದರು. ಬಂದ ಡಾಕ್ಟರು ಲಲಿತಳ ತಾಯಿಯೊಂದಿಗೆ ಒಂದೈದು ನಿಮಿಷ ಸಮಾಲೋಚನೆ ನಡೆಸಿ, ಆ ನಂತರ ಲಲಿತಾಳನ್ನು ಸಮೀಪಿಸಿ, ಅಕೆಯ ಉದ್ವೇಗ, ಆತಂಕ ಹಾಗೂ ವ್ಯಗ್ರತೆಯನ್ನು ಶಮನಗೊಳಿಸುವ ಮಾತುಗಳನ್ನಾಡಿ, ಮಂಚದ ಮೇಲಿದ್ದ ಹಾಸಿಗೆಯ ಮೇಲೆ ಮಲಗಿಸಿ, ಉಪಾಯದಿಂದ ಇಂಜೆಕ್ಷನ್ನೊಂದನ್ನು ತೋಳಿಗಿಳಿಸಿದರು. ನಿಧಾನವಾಗಿ ಶಾಂತಳಾದ ಲಲಿತ ನೋಡನೋಡುತಿದ್ದಂತೆ ನಿದ್ದೆಗೆ ಜಾರಿದಳು. ಲಲಿತಳ ತಾಯಿಗೆ ಕೆಲಮೊಂದು ಮಾತ್ರೆಗಳನ್ನು ನೀಡಿ, ಲಲಿತಳ ವರ್ತನೆಗಳನ್ನು ನಿಯಂತ್ರಿಸಲು ಕೆಲ ಸಲಹೆಗಳನ್ನೂ ನೀಡಿದರು. ಡಾಕ್ಟರನ್ನು ಬಿಟ್ಟು ಬರಲು ಆನಂದನನ್ನು ಕಳುಹಿಸಿದ ಮೇಷ್ಟ್ರು, ಆಗಿದ್ದಾದರೂ ಏನೆಂದು ಕೇಳಿದರು. ಮೇಷ್ಟ್ರನ್ನು ಮದುವೆಯಾಗಲು ಖಡಾಖಂಡಿತವಾದ ಒಪ್ಪಿಗೆಯನ್ನು ಈ ಕೂಡಲೇ ಕೊಡದ ಹೊರತು ಊಟವನ್ನೂ ಮಾಡೋದಿಲ್ಲ ಹಾಗೂ ಕಾಲೇಜಿಗೂ ಹೋಗೋದಿಲ್ಲ ಎಂದು ತನ್ನ ಹುಚ್ಚಾಟದ ಬೇಡಿಕೆಯನ್ನು ಮುಂದಿಟ್ಟುಕೊಂಡು ಈಗೊಂದು ವಾರದಿಂದ ಮನೆಮಂದಿಯನ್ನೆಲ್ಲಾ ಗೋಳಾಡಿಸಿದ್ದಳಂತೆ.

ಆಗಷ್ಟೇ ಹದಿನೆಂಟು ದಾಟಿದ್ದ ಆ ಎಳಸು ಲಲಿತಾ, ಮೇಷ್ಟ್ರ ಮೇಲಿನ ಅನುರಾಗದಿಂದ ಹದಿನೆಂಟು ಆಗಿರುವುದೇ ಮದುವೆ ಆಗೇ ಬಿಡಲು ಮುಖ್ಯ ಕ್ವಾಲಿಫಿಕೇಷನ್ ಎಂದುಕೊಂಡು ತಾಳಿ ಕಟ್ಟಿಸಿಯೇಬಿಡಿ ಎಂದು ರಚ್ಚೆ ತೆಗೆದಿರುವುದು ಮೇಷ್ಟ್ರಿಗೆ ಹಾಸ್ಯಾಸ್ಪದವೂ ಹಾಗೂ ಹುಡುಗಾಟವೂ ಆಗಿ ಕಾಣಿಸಿತು.

ಆವರೆವಿಗೆ ಮಾಡಿದ್ದ ರಂಪಾಟ, ಗೋಳಾಟ, ಉಪವಾಸ ಹಾಗೂ ಕೊಡಿಸಿಕೊಂಡಿದ್ದ ಇಂಜೆಕ್ಷನ್ನಿನ ಪ್ರಭಾವದಿಂದ ನಿದ್ರೆಗೆ ಜಾರಿದ್ದಳು. ಕಳೆದೇ ಹೋಗಿರುವಂತೆ ಶಾಂತ ಮುಖಭಾವ ಹೊತ್ತ ಲಲಿತಾಳಿಗೆ ರಗ್ಗೊಂದನ್ನು ಹೊದಿಸಿದ ಅವಳ ತಾಯಿ, ಕಿತ್ತು ಬಿದ್ದಿದ್ದ ಸೊಳ್ಳೆ ಪರದೆಯನ್ನು ಸರಿಯಾಗಿ ಕಟ್ಟಲು ಸಹಾಯ ಮಾಡುವಂತೆ ಮೇಷ್ಟ್ರಿಗೆ ಹೇಳಿದರು. ನಿದ್ರೆ ಮಾಡಿ ವಿಶ್ರಾಂತಿ ತೆಗೆದುಕೊಳ್ಳಲಿ, ಬೆಳಿಗ್ಗೆ ಬಂದು ಕಂಡು ಮಾತನಾಡಿಸುವುದಾಗಿ ಹೇಳಿದ ಮೇಷ್ಟ್ರು ತಮ್ಮ ಮನೆಯೆಡೆಗೆ ಹೋದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248